

ಆಕಾಶದ ನೀಲಿಯೊಂದಿಗೆ ಮಾತನಾಡುತ್ತಿರುವಂತೆ ಕಾಣಿಸುತ್ತಿರುವ 'ಅಮೃತ ಮಹೋತ್ಸವ'ದ ತ್ರಿವರ್ಣಧ್ವಜ ಭಾರತೀಯರ ಸಂಭ್ರಮವನ್ನಷ್ಟೇ ಸೂಚಿಸುತ್ತಿಲ್ಲ; ನಡೆದುಬಂದ ದಾರಿ ಹಾಗೂ ನಡೆಯಬೇಕಾದ ದಾರಿಯೂ ಬಾವುಟದ ಬೀಸಲ್ಲಿ ಕಾಣಿಸುತ್ತಿದೆ. ಸ್ವಾತಂತ್ರ್ಯ ಚಳವಳಿಯ ಕೆಲವು ಪ್ರಮುಖ ಘಟ್ಟಗಳನ್ನು ನೆನಪಿಸುವ ಈ ಬರಹ, ಜಾಗತಿಕ ಇತಿಹಾಸದ ಬಹು ವಿರಳ ಹಾಗೂ ವಿಶಿಷ್ಟವಾದ ಮಹಾಪಯಣವೊಂದರ ದಾಖಲೆಯಾಗಿದೆ. ಸ್ವಾತಂತ್ರ್ಯ ಚಳವಳಿ ತನ್ನ ನಡಿಗೆಯುದ್ದಕ್ಕೂ ಅಂತರ್ಜಲದಂತೆ ರೂಢಿಸಿಕೊಂಡಿದ್ದ ಬಹುತ್ವ ಮತ್ತು ಜಾತ್ಯತೀತ ಧೋರಣೆ 'ಅಮೃತ ಮಹೋತ್ಸವ'ದ ಸಂಭ್ರಮದಲ್ಲಿರುವ ನಾವು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾದ ಪಾಠವಾಗಿದೆ. ಧರ್ಮ ನಿರಪೇಕ್ಷ ಮತ್ತು ಅಹಿಂಸೆಯ 'ಭಾರತೀಯತೆ' ಆಗಾಗ ಹಿನ್ನಡೆ ಅನುಭವಿಸಿದರೂ, ಮಾಗದ ಗಾಯಗಳು ಮೈಮೇಲೆ ಮೂಡಿದರೂ, ತನ್ನ ಮೂಲ ಸ್ರೋತಕ್ಕೆ ಬದ್ಧವಾಗಿರುವುದನ್ನು ಸಹೃದಯರ ಗಮನಕ್ಕೆ ತರುವ 'ಅಮೃತ ಮಥನ'ದ ಈ ವಿಶ್ಲೇಷಣೆ, ವಿವೇಕದ ಹಣತೆಯನ್ನು ಎದೆಯಿಂದ ಎದೆಗೆ ದಾಟಿಸುವ ಹಂಬಲವನ್ನು ಹೊಂದಿದೆ.

# ಇದು ಸ್ವತಂತ್ರ ಭಾರತದ ಕಥನ!